International Journal of Kannada Research
www.kannadajournal.com

**ISSN: 2454–5813**
IJKR 2019; 5(1): 14-16
© 2019 IJKR
www.kannadajournal.com
Received: 05-11-2018
Accepted: 08-12-2018

**ರವೀಂದ್ರ.ಜೆ.ಸಿ**
ಸಂಶೋಧನಾ ವಿದ್ಯಾರ್ಥಿ ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಡಾ.ಎಸ್ ಆಂಜನೇಯ**
ಪ್ರಾಂಶುಪಾಲರು ಮತ್ತು ಮಾರ್ಗದರ್ಶಕರು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Correspondence**
**ರವೀಂದ್ರ.ಜೆ.ಸಿ**
ಸಂಶೋಧನಾ ವಿದ್ಯಾರ್ಥಿ ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

# ಮೈಸೂರು ಸಂಸ್ಥಾನದಲ್ಲಿ ಬಾಲ್ಯವಿವಾಹ ಪದ್ಧತಿ – ಒಂದು ವಿಶ್ಲೇಷಣೆ (ವಿಶೇಷವಾಗಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ)

**ರವೀಂದ್ರ.ಜೆ.ಸಿ, ಡಾ.ಎಸ್ ಆಂಜನೇಯ**

ಭಾರತದ ಸಂಸ್ಕೃತಿಯಲ್ಲಿ ಸಹಸ್ರಾರು ವರ್ಷಗಳಿಂದ ನಡೆದುಕೊಂಡು ಬಂದ ಹಲವಾರು ಸಂಪ್ರದಾಯ, ಸಾಮಾಜಿಕ, ಹಿಂದೂ ಸಂಸ್ಕೃತಿಗಳಲ್ಲಿ ಬಾಲ್ಯ ವಿವಾಹವು ಕೂಡ ಒಂದು. ಇದು ಬೆಳೆದು ಬಂದಂತಹ ದಾರಿ ಹಲವು ಕಾರಣಗಳಿಂದ ಕೂಡಿತ್ತು. ಮನುಷ್ಯ ತನ್ನ ನೆಲೆಯೊಳಗೆ ತನ್ನನ್ನು ಗುರ್ತಿಸಿಕೊಳ್ಳುವ ಹಾಗೂ ತನ್ನ ಪೀಳಿಗೆಯನ್ನು ಮುಂದುವರೆಸುವಂತಹ ಕ್ರಿಯೆಗಳಲ್ಲಿ ನಾವು ವಿವಾಹಗಳನ್ನು ನೋಡುತ್ತೇವೆ. ವೇದಗಳ ಕಾಲದಲ್ಲಿ ಆರಂಭವಾದ ಬಾಲ್ಯವಿವಾಹ ಸಂಸ್ಕೃತಿ ಯಾವುದೇ ಸಾಮಾಜಿಕ ಕಟ್ಟುಪಾಡುಗಳಿಂದ ಕೂಡಿರಲಿಲ್ಲ. ಅನಂತರ ಬಂದಂತಹ ವಿದೇಶಿ ದಾಳಿಕಾರರ ಪ್ರಭಾವದಿಂದ ಬಾಲ್ಯವಿವಾಹ ಪದ್ಧತಿ ಭಿನ್ನ ಸ್ವರೂಪ ಪಡೆಯಿತು. ಇದು ಮುಂದೆ ದೊಡ್ಡ ಸಾಮಾಜಿಕ ಪಿಡುಗಾಗಿ ಪರಿಣಮಿಸಿದ ಪರಿಣಾಮ ಸಮಾಜ ಸುಧಾರಕರ ಪ್ರಭಾವದಿಂದ ಹಾಗೂ ಸಂಸ್ಥಾನದ ದಿಟ್ಟ ನಿಲುವಿನಿಂದ ಶಾಸನವನ್ನು ಜಾರಿಮಾಡುವ ಮೂಲಕ ಬಾಲ್ಯವಿವಾಹ ನಿಷೇಧ ಕಾಯಿದೆಯನ್ನು ಜಾರಿಗೆ ತರಲಾಯಿತು. ಪ್ರಸ್ತುತ ಲೇಖನವು ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಹಿಂದೂ ಸಮುದಾಯದಲ್ಲಿ ಕಂಡುಬಂದಂತಹ ಬಾಲ್ಯವಿವಾಹ ಮತ್ತು ಅದರ ಪರಿಣಾಮವನ್ನು ತಿಳಿಸುವುದಾಗಿದೆ.

## ಬಾಲ್ಯವಿವಾಹದ ಬೆಳವಣಿಗೆ

ಹಿಂದೂ ಸಂಸ್ಕೃತಿಯ ತಳಹದಿ ಹೊಂದಿದ ಪ್ರಾಚೀನ ವೇದಗಳ ಕಾಲವೇ ಬಾಲ್ಯವಿವಾಹಕ್ಕೆ ಮೂಲಬೇರು. ಈ ಕಾಲದಲ್ಲಿ ಸಾಮಾಜಿಕ, ಧಾರ್ಮಿಕ ಕ್ರಿಯಾವಿಧಿಗಳು ಮೇಲ್ವರ್ಗಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಲ್ಲಿ ಅಧಿಕವಾಗಿದ್ದವು. ನಾಲ್ಕನೇ ವರ್ಗವಾದ ಶೂದ್ರರು ಮೇಲಿನವರ ಅನುಕರಣೆಯವರಾಗಿದ್ದರು. ವೇದಗಳ ಕಾಲದಲ್ಲಿ ಕಟ್ಟುಪಾಡುಗಳು ಏನು ಇರಲಿಲ್ಲ ಆದರೆ ಆಚರಣೆಯ ಸಂಸ್ಕೃತಿ ಇತ್ತು.[1] ಕುಟುಂಬಗಳ ಬಾಂಧವ್ಯ ಹಾಗೂ ಲೈಂಗಿಕ ಸಂಪರ್ಕವೇ ಬಾಲ್ಯ ವಯಸ್ಸಿನ ಸಂಸ್ಕಾರಗಳಾಗಿವೆ.[2] ಇದಕ್ಕೆ ಆಧಾರಗಳೆಂದರೆ ನಾರದ ಸ್ಮೃತಿಯಲ್ಲಿ 08 ವರ್ಷದೊಳಗೆ ಹೆಣ್ಣುಮಕ್ಕಳ ವಿವಾಹವೇರ್ಪಡಿಸಬೇಕೆಂಬ ನಿರ್ಬಂಧನವಿದೆ.[3] ಏಕೆ ಬಾಲ್ಯವಿವಾಹ ನಡೆಸಲಾಗುತ್ತಿತ್ತು ಎಂದರೆ ಇತಿಹಾಸಕಾರರಾದ ಎ.ಎಸ್. ಅಲ್ಟೇಕರ್ ಹೇಳುವಂತೆ ಪ್ರಾಚೀನ ಕಾಲದಲ್ಲಿ ಯಜ್ಞಯಾಗಾದಿ ಮಾಡುವಾಗ ಯಜ್ಞಸ್ಥಳಕ್ಕೆ ವಿವಾಹಿತರಿಗೆ ಮಾತ್ರ ಪ್ರವೇಶವಿದ್ದರಿಂದ ಬಾಲ್ಯವಿವಾಹ ಆಚರಣೆ ಪ್ರಾಧಾನ್ಯತೆ ಹೊಂದಲು ಸಾಧ್ಯವಾಯಿತು ಎಂದು ಹೇಳಿದ್ದಾರೆ.[4] ನಂತರದ ಬೆಳವಣಿಗೆಯಾದ ವಿದೇಶಿಯರ ದಾಳಿಯ ವೇಳೆ ತನ್ನ ಸಂಸ್ಕೃತಿ, ಸಮಾಜ ಹಾಗೂ ಸ್ವಜಾತಿಯನ್ನು ಹಾಗೂ ಸಂಪ್ರದಾಯ ಹೆಣ್ಣುಮಕ್ಕಳ ಮಾನವನ್ನು ರಕ್ಷಿಸಿಕೊಳ್ಳಲು ಮಧ್ಯಯುಗೀನ ಮುಸ್ಲಿಂ ದಾಳಿಕೋರರ ಕಾಲದಲ್ಲಿ ಅಧಿಕವಾಯಿತು. ಅದು ಮುಂದೆ ಸಾಮಾಜಿಕ–ಪಿಡುಗಾಗಿ ಪರಿವರ್ತನೆಯಾಗಲು ಕಾರಣವಾಯಿತು. ಈ ಪಿಡುಗು ಮುಂದೆ ಹೇಗಿತ್ತೆಂದರೆ, ಹಿಂದಯೇ ಮನು ಹೇಳುವಂತೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅನರ್ಹಳು ಎಂಬ ಕಟ್ಟುಪಾಡುಗಳನ್ನು ವಿಧಿಸಿ ಆಕೆಯನ್ನು ಬಂಧಿಸುವುದಾಗಿತ್ತು.

ಬ್ರಿಟಿಷರ ಆಗಮನದಿಂದ ಭಾರತದ ಸಂಪ್ರದಾಯ, ಸಮಾಜದ ಪಿಡುಗುಗಳೇ ದೊಡ್ಡ ಬದಲಾವಣೆಗೆ ಒಳಗಾಗುವ ಮೂಲಕ ಆಧುನಿಕತೆಗೆ ಸ್ತ್ರೀಯರನ್ನು ಕೊಂಡೊಯ್ಯಲಾಯಿತು. ಬ್ರಿಟಿಷರು ಜಾರಿಗೆ ತಂದಂತಹ 1772ರ ರಾಯಲ್ ಮ್ಯಾರೇಜ್ ಆ್ಯಕ್ಟ್ ಕ್ರೈಸ್ತರ ಹೆಣ್ಣುಮಕ್ಕಳ ಸ್ವಾತಂತ್ರ್ಯದ ಹೆಜ್ಜೆಗುರುತುಗಳನ್ನು ಯಾವಾಗ ಗುರ್ತಿಸಿತ್ತೋ, ಇದರಿಂದ ಪ್ರೇರಿತರಾದ ಹಾಗೂ ಪಾಶ್ಚಾತ್ಯ ಶಿಕ್ಷಣದ ಪ್ರಭಾವಕ್ಕೆ ಒಳಗಾದ ಭಾರತೀಯ ಸಮಾಜ ಸುಧಾರಕರ ಗಮನವನ್ನು ಸೆಳೆಯುವ ಮೂಲಕ

ಬಾಲ್ಯವಿವಾಹ ನಿಷೇಧ ಶಾಸನ ಜಾರಿಗೆ ತರುವಲ್ಲಿ ಶ್ರಮಿಸುವಂತಾಯಿತು.[5]
ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಪಿಡುಗಿನ ವಿರುದ್ಧ ಸುಧಾರಣಾವಾದಿಗಳ ಅಲೆಗೆ ಸಿಲುಕಿದ ಬಾಲ್ಯವಿವಾಹವನ್ನು ತೊಡೆದುಹಾಕಲು ದೊಡ್ಡ ಆಂದೋಲನವೇ ನಡೆಯಿತು. ಅಂತಹ ಪ್ರಮುಖ ಸುಧಾರಣಾವಾದಿಗಳೆಂದರೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಎಂ. ವೆಂಕಟಕೃಷ್ಣಯ್ಯ, ರಂಗಯ್ಯ ಅಯ್ಯಂಗಾರ್, ಡಿ. ವೆಂಕಟರಾಮಯ್ಯ, ಅಂಬಳೆ ಅಣ್ಣಯ್ಯ, ಶ್ರೀನಿವಾಸರಾವ್ ಪ್ರಮುಖರಾಗಿ ಬಾಲ್ಯವಿವಾಹದ ವಿರುದ್ಧ ಶಾಸನ ಸಭೆಗಳಲ್ಲಿ ಗಟ್ಟಿಧ್ವನಿಯೆತ್ತುವ ಮೂಲಕ ಸಾಮಾಜಿಕ ಪಿಡುಗಿನ ವಿರುದ್ಧ ಗಮನಸೆಳೆದರು.[6]
ದಿವಾನರಾದ ಕೆ. ಶೇಷಾದ್ರಿ ಅಯ್ಯರ್ ಸಂಪ್ರದಾಯವಾದಿಗಳಾಗಿದ್ದರು. ಬಾಲ್ಯವಿವಾಹದಿಂದ ಉಂಟಾಗುತ್ತಿರುವ ಅನಾಹುತಗಳನ್ನು ಗಂಭೀರವಾಗಿ ಪರಿಗಣಿಸುವುದರ ಮೂಲಕ 1893 ಶಾಸನ ಸಭೆಯಲ್ಲಿ ದೃಢನಿರ್ಧಾರವನ್ನು ತೆಗೆದುಕೊಂಡಿದ್ದರಿಂದ 1894ರ ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿಗೊಳ್ಳಲು ಸಾಧ್ಯವಾಯಿತು. ಇವರ ಪ್ರಯತ್ನವೇ ಬಾಲ್ಯವಿವಾಹ ನಿಷೆಧಕ್ಕೆ ಕಾರಣವಾಯಿತು.[7]
ಬಾಲ್ಯವಿವಾಹದ ಅಂಕಿ–ಅಂಶಗಳು ಹಾಗೂ ಪ್ರಕರಣಗಳನ್ನು ನಾವು ನೋಡಬೇಕೆಂದರೆ ನಮಗೆ ಜನಗಣತಿಯಲ್ಲಿನ ಮಾಹಿತಿಯು ಅತ್ಯವಶ್ಯಕವಾಗಿದೆ. ಇದೇ ಮಾನದಂಡ ಬಳಸಿಕೊಳ್ಳುವ ಮೂಲಕ ತುಮಕೂರು ಜಿಲ್ಲೆಯಲ್ಲಿ ಕಂಡುಬಂದಂತಹ ಬಾಲ್ಯವಿವಾಹವನ್ನು ತಿಳಿಸುವುದಾಗಿದೆ.

**ತುಮಕೂರು ಜಿಲ್ಲೆಯ ಜನಗಣತಿ ವರದಿ**

| ಕ್ರಮ ಸಂಖ್ಯೆ | 1881 ಜನಗಣತಿ | | ಬಾಲ್ಯವಿವಾಹ | | | ವಿದುರರು ಮತ್ತು ವಿಧವೆಯರು | | |
|---|---|---|---|---|---|---|---|---|
| | ಜನಸಂಖ್ಯೆ | | 0 – 9 | | 10–15 | 0 – 9 | | 10–15 |
| | ಬಾಲಕ | ಬಾಲಕಿ | ಗಂ | ಹೆ | ಗಂ | ಗಂ | ಹೆ | ಗಂ |
| 01 | 72,372 | 40,880 | 125 | 1,439 | 2,935 | 1 | 77 | 216 |
| 1891 ಜನಗಣತಿ | | | | | | | | |
| 02 | 1,38,008 | 1,25,867 | 774 | 25,341 | 8,497 | 11 | 310 | 38 |
| 1901 ಜನಗಣತಿ | | | | | | | | |
| 03 | 1,27,946 | 1,07,456 | 0 | 4,550 | 786 | 0 | 73 | 12 |
| | | | 1931 ಜನಗಣತಿ | | | | | |
| | | | 0 – 14 | | 14–18 | 0 – 14 | | 14–18 |
| 04 | 2,16,014 | 1,76,975 | 364 | 12,502 | 5,399 | 15 | 233 | 107 |

ಮೇಲಿನ ಕೋಷ್ಟಕದ ಪಟ್ಟಿಯಲ್ಲಿನ ಮಾಹಿತಿಯಂತೆ 1881ರ ಜನಗಣತಿಯಲ್ಲಿ 14 ವರ್ಷದೊಳಗಿನ ಬಾಲಕರು ತುಮಕೂರು ಜಿಲ್ಲೆಯಲ್ಲಿ 72,372 ಕಂಡುಬಂದರೆ, 08 ವರ್ಷದೊಳಗಿನ ಬಾಲಕಿಯರು 40,880 ಕಂಡುಬರುತ್ತಾರೆ. ಇವರಲ್ಲಿ 0–9 ವರ್ಷದೊಳಗೆ ಬಾಲಕರು 125 ಹಾಗೂ ಬಾಲಕಿಯರು 1,439 ಬಾಲ್ಯವಿವಾಹವಾಗಿದ್ದಾರೆ. 10–15 ವರ್ಷದೊಳಗಿನ ಬಾಲಕರು 2,935 ಬಾಲ್ಯವಿವಾಹವಾಗಿದ್ದಾರೆ. ಬಾಲ್ಯವಿವಾಹ ಪರಿಣಾಮದಿಂದ 0–9 ವರ್ಷದೊಳಗಿನ ಬಾಲಕರು 1 ವಿದುರರಾದರೆ, ಬಾಲಕಿಯರು 77 ವಿಧವೆಯರಾಗಿದ್ದಾರೆ ಹಾಗೂ 10–15 ವರ್ಷದೊಳಗೆ ಬಾಲಕರು 216 ವಿದುರರಾಗಿದ್ದಾರೆ.[8]
1891ರ ಜನಗಣತಿಯಲ್ಲಿ 14 ವರ್ಷದೊಳಗಿನ ಬಾಲಕರು 1,38,008 ಕಂಡುಬಂದರೆ, ಬಾಲಕಿಯರು 1,25,867 ಜನಸಂಖ್ಯೆ 08 ವರ್ಷದೊಳಗೆ ಕಂಡುಬರುತ್ತದೆ. ಇವರಲ್ಲಿ 0–9 ವರ್ಷದೊಳಗೆ ಬಾಲಕರು 774 ಹಾಗೂ 10–15 ವರ್ಷದೊಳಗೆ ಬಾಲಕರು 8,497 ಬಾಲ್ಯವಿವಾಹವಾಗಿದ್ದಾರೆ. ಹಾಗೆಯೇ 0–9 ವರ್ಷದೊಳಗೆ ಬಾಲಕಿಯರು 25,341 ಬಾಲ್ಯವಿವಾಹವಾಗಿದ್ದಾರೆ. ಬಾಲ್ಯವಿವಾಹದ ಪರಿಣಾಮದಿಂದಾಗಿ 0–9 ವರ್ಷದೊಳಗೆ ಬಾಲಕರು 11 ವಿದುರರಾದರೆ, ಬಾಲಕಿಯರು 310 ವಿಧವೆಯಾಗಿದ್ದಾರೆ. 10–15 ವರ್ಷದೊಳಗೆ ಬಾಲಕರು 38 ವಿದುರರಾಗಿದ್ದಾರೆ.[9]
1901ರ ಜನಗಣತಿಯಂತೆ 14 ವರ್ಷದೊಳಗಿನ ಬಾಲಕರು 1,27,946 ಇದ್ದರೆ, 08 ವರ್ಷದೊಳಗಿನ ಬಾಲಕಿಯರು 1,07,456 ಇದ್ದಾರೆ. ಇವರಲ್ಲಿ 0–9 ವರ್ಷದೊಳಗಿನ ಬಾಲಕರು ಬಾಲ್ಯವಿವಾಹದ ಸಂಗತಿಗಳಿಲ್ಲ. ಆದರೆ 4550 ಬಾಲಕಿಯರು ಬಾಲ್ಯವಿವಾಹವಾಗಿದ್ದಾರೆ. 10–15 ವರ್ಷದೊಳಗೆ ಬಾಲಕರು 786 ಬಾಲ್ಯವಿವಾಹವಾಗಿದ್ದಾರೆ. ಇದರ ಪರಿಣಾಮದಿಂದ 0–9 ವರ್ಷದೊಳಗೆ 73 ಬಾಲಕಿಯರು ವಿಧವೆಯರಾದರೆ, 10–15 ವರ್ಷದೊಳಗೆ 12 ಬಾಲಕರು ವಿದುರರಾಗಿದ್ದಾರೆ.[10]
1931ರ ಜನಗಣತಿಯಂತೆ 18 ವರ್ಷದೊಳಗಿನ ಬಾಲಕರು 2,16,014 ಇದ್ದರೆ, 1,76,975 ಬಾಲಕಿಯರಿದ್ದಾರೆ. ಇವರಲ್ಲಿ 0–14 ವರ್ಷದೊಳಗಿನ ಬಾಲಕರು 364 ಬಾಲ್ಯವಿವಾಹವಾಗಿದ್ದರೆ, ಬಾಲಕಿಯರು 12,502 ಬಾಲ್ಯವಿವಾಹವಾಗಿದ್ದಾರೆ,0–14 ವರ್ಷದೊಳಗಿನ ಬಾಲಕರು 15 ವಿದುರರಾದರೆ, ಇದೇ ವಯೋಮಾನದಲ್ಲಿ 233 ಬಾಲಕಿಯರು ವೈಧಮ್ಯ ಹೊಂದಿದ್ದಾರೆ. 14–18 ವರ್ಷದೊಳಗಿನ ಬಾಲಕರು 107 ವಿದುರರಾಗಿದ್ದಾರೆ.[11]
ಮೇಲಿನ ಜನಗಣತಿಯ ಅಂಕಿ–ಅಂಶಗಳು 14 ಮತ್ತು 18 ವರ್ಷದೊಳಗಿನ ಬಾಲಕರ ಜನಸಂಖ್ಯೆ ಹಾಗೂ 14 ವರ್ಷದೊಳಗಿನ ಬಾಲಕಿಯ ಜನಸಂಖ್ಯೆ ಇದೇ ವಯೋಮಾನದಲ್ಲಿ ಬಾಲಕ, ಬಾಲಕಿಯರ ಬಾಲ್ಯವಿವಾಹ ಪ್ರಮಾಣ ಹಾಗೂ ವಿದುರ, ವಿಧವೆಯರ ಪ್ರಮಾಣವನ್ನು ಕೋಷ್ಟಕದ ಪಟ್ಟಿಯಲ್ಲಿ ನೋಡಬಹುದು. ಹಾಗೂ 1911, 1921, 1941ರ ಜನಗಣತಿಯಲ್ಲಿ ಮಾಹಿತಿಯನ್ನು ಪೂರ್ವವಿಭಾಗಕ್ಕೆ ತುಮಕೂರು ಜಿಲ್ಲೆಯನ್ನು ಸೇರಿಸಿರುವುದರಿಂದ ಪ್ರತ್ಯೇಕವಾಗಿ ವರ್ಗೀಕರಿಸಲಾಗಿಲ್ಲ. ಮೇಲಿನ ಅಂಶದಂತೆ ಮೈಸೂರು ಸಂಸ್ಥಾನ 1894ರಲ್ಲಿ ಜಾರಿಗೆ ತಂದ ಬಾಲ್ಯವಿವಾಹ ನಿಷೇಧ ಕಾಯ್ದೆಯಿಂದಾಗಿ ತುಮಕೂರು ಜಿಲ್ಲೆಯಲ್ಲಿ ಯಾವ ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗುವ ಮೂಲಕ ಶಿಕ್ಷಾ ಪ್ರಮಾಣವನ್ನು ವಿಧಿಸಲಾಯಿತು ಎಂಬುದನ್ನು ಈ ಕಾಯ್ದೆಯ ಮೇರೆಗೆ ತಿಳಿಯಬಹುದು.

**ಪ್ರಕರಣಗಳು**

**1. ಹೊನ್ನಿ :** 1895 ರಲ್ಲಿ ಜರುಗಿದ ಹೊನ್ನಿ ಎಂಬ ಬಾಲಕಿಯ

ಬಾಲ್ಯವಿವಾಹವು ತುಮಕೂರು ಜಿಲ್ಲೆಯ ಕಸಬಾ ತಾಲೋಕಿನ ಕಣ್ಣುಕುಪ್ಪೆ ಎಂಬ ಗ್ರಾಮದಲ್ಲಿ ಜರುಗಿತ್ತು. ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಪೊಲೀಸ್ ವರಿಷ್ಠಾಧಿಕಾರಿಗಳು ಆರೋಪಿಗಳ ಮೇಲೆ ಪ್ರಕರಣ ದಾಖಲಿಸಿದರು. ಇದರಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ತಪ್ಪಿತಸ್ಥ ಬಾಲ್ಯವಿವಾಹ ನಡೆಸಿದ ಆರೋಪಗಳಿಗೆ 1896ರಲ್ಲಿ ಸದಾ ಶಿಕ್ಷೆ ವಿಧಿಸಿತು.[12]

**2. ಹನುಮಂತ :** ತುಮಕೂರು ಜಿಲ್ಲೆಯ ಕಸಬಾ ತಾಲೋಕಿನ ಕರಿಕೆರೆ ಎಂಬ ಗ್ರಾಮದಲ್ಲಿ ಬಾಲಕ ಹನುಮಂತನ ಬಾಲ್ಯವಿವಾಹ ನಡೆಯಿತು. ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಪೊಲೀಸ್ ವರಿಷ್ಠಾಧಿಕಾರಿಗಳು ಆರೋಪಿಗಳಾದ ದೊಡ್ಡಲಿಂಗಮ್ಮ, ಲಕ್ಷ್ಮೀನಾರಾಯಣಪ್ಪ ಮತ್ತು ನರಸಪ್ಪರಿಗೆ ಆರೋಪ ಸಾಬೀತಾದ ಕಾರಣ ಜಿಲ್ಲಾ ನ್ಯಾಯಾಲಯ ಸದಾ ಶಿಕ್ಷೆ ವಿಧಿಸಿದೆ.[13]

**3. ಗುಡ್ಡಯ್ಯ ಮತ್ತು ಇತರರು :** ತುಮಕೂರು ಜಿಲ್ಲೆ, ತಿಪಟೂರು ತಾಲೋಕಿನ ಹಾನಿವಾಳ ಎಂಬ ಗ್ರಾಮದಲ್ಲಿ ಬಾಲ್ಯವಿವಾಹ ಜರುಗಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಪೊಲೀಸ್ ವರಿಷ್ಠಾಧಿಕಾರಿಗಳು ಆರೋಪಿಗಳಾದ ಗುಡ್ಡಯ್ಯ, ತಳವಾರ ಕರಿಯ ಹಾಗೂ ವೆಂಕಟರಾಯರ ಮೇಲೆ ಪ್ರಕರಣ ದಾಖಲಿಸಿದರು. ನ್ಯಾಯಾಲಯದಲ್ಲಿ ಸಾಕ್ಷ್ಯಾಧಾರಗಳು ಸಾಬೀತಾದ ಕಾರಣ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆರೋಪಿಗಳಿಗೆ ತಲಾ 5 ರೂ. ಜುಲ್ಮಾನೆ ವಿಧಿಸಿದೆ.[14]

ಹೀಗೆ ಹಲವು ಪ್ರಕರಣಗಳು ಬಾಲ್ಯವಿವಾಹ ನಡೆಸುವ, ಅಥವಾ ಬಾಲ್ಯವಿವಾಹಕ್ಕೆ ಕುಮ್ಮಕ್ಕು ನೀಡಿದ ಹಾಗೂ ಬಾಲ್ಯವಿವಾಹವನ್ನು ನೆರವೇರಿಸಿದ ಪುರೋಹಿತರಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯಲ್ಲಿ ಜುಲ್ಮಾನೆ ಹಾಗೂ ದಂಡಗಳನ್ನು ಘನ ನ್ಯಾಯಾಲಯ ವಿಧಿಸಿದೆ. ಬಾಲ್ಯವಿವಾಹ ನಿಷೇಧ ಶಿಕ್ಷೆ ನೀಡುವ ಮೂಲಕ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಅಧಿಕಗೊಳ್ಳುತ್ತಿರುವಂತಹ ಬಾಲ್ಯವಿವಾಹಕ್ಕೆ ಕಡಿವಾಣ ಹಾಕಿದವು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಭಾರತದಲ್ಲಿ ಎಷ್ಟೋ ಕಾನೂನುಗಳು ಜಾರಿಗೆ ಬಂದರು, ಬಹಳ ಪ್ರಬಲವಾಗಿ ನಂಬಿಕೊಂಡು ಬಂದಿರುವಂತಹ ಸಂಪ್ರದಾಯ, ಸಂಸ್ಕಾರ, ವಿಧಿವಿಧಾನದ ಆಚರಣೆಗಳನ್ನು ಬಹುಬೇಗ ತೊಡೆದುಹಾಕಲು ಸಾಧ್ಯವಾಗಗಿಲ್ಲ. ಏಕೆಂದರೆ ಸಾಮಾಜಿಕ ಪಿಡುಗಿನ ಸುಳಿವೇ ಇಲ್ಲದೆ ಇಲ್ಲಿ ನಡೆದು ಹೋಗಿರುತ್ತದೆ. ಕೇವಲ ಬೆರಳೆಣಿಕೆಯಷ್ಟು ಪ್ರಗತಿಪರ ಚಿಂತಕರ ಫಲವಾಗಿ ಸ್ವಲ್ಪ ಪ್ರಮಾಣದ ಪಿಡುಗು ನಾಶವಾಗಿದೆ ಅಷ್ಟೇ. ಭಾರತಕ್ಕೆ ಸ್ವಾತಂತ್ರ್ಯ ಬಂದು 60 ವರ್ಷ ತಲುಪಿದರು ಬಾಲ್ಯವಿವಾಹ ಇನ್ನೂ ಜೀವಂತವಾಗಿಯೇ ಇದೆ. ಭಾರತದಲ್ಲೇ ಮೊದಲ ಬಾರಿಗೆ ಬಾಲ್ಯವಿವಾಹ ನಿಷೇಧ ಶಾಸನವನ್ನು ಮೈಸೂರು ಸಂಸ್ಥಾನ 1894ರಲ್ಲಿ ಜಾರಿಗೆತಂದರು, ಕರ್ನಾಟಕದಲ್ಲಿ ಅದರಲ್ಲೂ ತುಮಕೂರು ಭಾಗದಲ್ಲಿ ಇನ್ನೂ ಅಜಾರಾಮವಾಗಿದೆ. ಈ ಜೀವಂತ ಪಿಡುಗನ್ನು ನಾಶಮಾಡಲು ಪ್ರಮುಖ ಪ್ರಯೋಗವೆಂದರೆ ಶಿಕ್ಷಣದ ಅರಿವು, ಬಾಲ್ಯವಿವಾಹ ಪಿಡುಗಿನ ಬಗೆಗಿನ ಆಂದೋಲನಗಳು ಸ್ವಸ್ಥ ಸಮಾಜಕ್ಕೆ ಬೇಕಾಗಿದೆ.

**ಖಜಜಿಡಿಜಟಿಛಿಜ**


1. ವಿ.ಕಾ.ರಾಜವಾಡೆ–ಭಾರತೀಯ ವಿವಾಹ ಸಂಸ್ಥೆಯ ಇತಿಹಾಸ, ನವಕರ್ನಾಟಕ ಪ್ರಕಾಶನ ಬೆಂಗಳೂರು 1993,ಪುಟ ಸಂಖ್ಯೆ 28
2. ಅದೇ, ಪುಟ ಸಂಖ್ಯೆ 33
3. ಡಾ.ಬಿ.ಆರ್.ಅಂಬೇಡ್ಕರ್–ರೈಸ್ ಅಂಡ್ ಫಾಲ್ ಆಫ್ ಹಿಂದೂ ವಿಮೆನ್, ಭೀಮ್ ಪ್ರಕಾಶನ ಜಲಂಧರ್,2010 ಪುಟ ಸಂಖ್ಯೆ 74
4. Altekar AS. Post Vedic Period, 58.
5. Harbert Brum-A Selection of Legal Maxim, Universal Book Traders New Delhi, 2010, 326.
6. Proceedings of the Assembly of Representative Raiyts and Merchants, 1891, 36.
7. Proceedings of Assembly Debate, 1894, 21.
8. Census of India, 1881, 12-21.
9. Census of India, 1891, 2-39.
10. Census of India, 1901, 95-152.
11. Census of India, 1931, 44-65.
12. Proceedings of the Government of Mysore, 1897, 151.
13. Proceedings of the His Highness the Maharaja of Mysore, 1907, 174.
14. Proceedings of the His Highness the Maharaja of Mysore, 1907, 180.